ದಿ: **08-07-2022** ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಅರ್ಜಿಗಳ ಮೇಲಿನ ಆದೇಶದನ್ವಯ ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ಶ್ರೀ.ಎಮ್ ಎಸ್ ಹೆಚ್ ವಕೀಲರಿಂದ

ನನ್ನ ತಂದೆಯ ಸೇವಾ ಪುಸ್ತಕವನ್ನು ಹಾಜರುಪಡಿಸಿದ್ದು ನಿ ಪಿ **26** ಎಂದು, ದಿನಾಂಕ **15-2-2020** ರಂದು ಹಾನಗಲ್ ತಹಶೀಲ್ದಾರರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ನಿ ಪಿ **27** ಎಂದು, ದಿನಾಂಕ **19-05-1983** ರ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿ ಪಿ **28** ಎಂದು, ವಿ ಪಿ ಸಿ ಸಂಖ್ಯೆ **336, 337, 267** ಕ್ಕೆ ಸಂಬಂಧಿದ ವಿ ಪಿ ಸಿ ಎಕ್ಸಟ್ರ್ಯಾಕ್ಟಗಳನ್ನು ಹಾಜರುಪಡಿಸಿದ್ದು ನಿ ಪಿ **29** ರಿಂದ ನಿ ಪಿ **31** ಎಂದು ಗುರುತಿಸಲಾಯಿತು. ದಿನಾಂಕ **30-4-2006** ರಂದು ಮಾಡಿದ ವಾಟ್ನಿಪತ್ರವನ್ನು ಬೆಳಗಾಲಪೇಟೆ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಮುಂದೆ ಹಾಜರುಪಡಿಸಿದ ಬಗ್ಗೆ ನೀಡಿದ ಸ್ವೀಕೃತಿಯ ಬಾಬ್ತು ಸದರಿ ದಾಖಲೆಯನ್ನು ಹಾಜರುಪಡಿಸಿದ್ದು ನಿ ಪಿ **32** ಎಂದು ಗುರುತಿಸಲಾಯಿತು. **(1, 4** ರಿಂದ **6** ನೇ ಪ್ರತಿವಾದಿಯರ ಪರ ಶ್ರೀ.ಆ ರ್ ಪಿ ಎ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು). ದಿನಾಂಕ **4-10-2012** ರ ಸಂಯುಕ್ತ ಕರ್ನಾಟಕ ಷತ್ರಿಕೆಯನ್ನು ಹಾಜರುಪಡಿಸಿದ್ದು ನಿ ಪಿ **33** ಎಂದು, ಸದರಿ ಷತ್ರಿಕೆಯಲ್ಲಿ ಮಾಡಿದ ಷತ್ರಿಕಾ ಪ್ರಕಟಣೆ ಭಾಗವನ್ನು ನಿ ಪಿ **33(ಎ)** ಎಂದು, ದಿನಾಂಕ **06-10-2012** ರಂದು ನಮ್ಮ ವಕೀಲರ ಮೂಲಕ ನೀಡಿದ ನೋಟಿಸಿನ ಕಚೇರಿ

ಪ್ರತಿಯನ್ನು ನಿ ಪಿ 34 ಎಂದು, ಸದರಿ ನೋಟಿಸನ್ನು ಕಳುಹಿಸಿದ ಬಗ್ಗೆ ಎರಡು ಅಂಚೆ ರಶೀದಿಗಳನ್ನು ನಿ ಪಿ 35 ಮತ್ತು ನಿ ಪಿ 36 ಎಂದು, ಸದರಿ ನೋಟೀಸು ಜಾರಿಯಾದ ಬಗ್ಗೆ ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ನಿ ಪಿ 37 ಮತ್ತು ನಿ ಪಿ 38 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲು : 3 ನೇ ಪ್ರತಿವಾದಿ ಪರ

(ಶ್ರೀ. ಎಸ್ ಜಿ ವಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್